**ವಿಷಯ : ಕನ್ನಡ (208)**

**ಹತ್ತನೇ (ಸೆಕೆಂಡರಿ) ತರಗತಿ ಪರೀಕ್ಷೆ**

**ಸಮಯ : 3 ಗಂಟೆಗಳು** **ಗರಿಷ್ಠ ಅಂಕಗಳು : 100**

**ಭಾಗ–1**

**ಸೂಚನೆ : ಆಂತರಿಕ ಆಯ್ಕೆ ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಪ್ರಶ್ನೆಗಳಿಗೆ ಕಡ್ಡಾಯವಾಗಿ ಉತ್ತರಿಸಿ**

**ವಿಭಾಗ –ಅ – ಓದುವಿಕೆ**

**ಈ ಕೆಳಕಂಡ ಗದ್ಯಭಾಗವನ್ನು ಎಚ್ಚರಿಕೆಯಿಂದ ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ :**

ಯಾವುದೋ ಹಳೆಕೆರೆ ಅದು. ಸುತ್ತು ಅದರ ಇರವೇ ಕಾಣದಷ್ಟು ದಟ್ಟವಾಗಿ ಗುಲಾಬಿ ಪೊದೆಗಳು. ಬೆಳೆದಿದ್ದವು. ಅಂಚಿನಲ್ಲೆಲ್ಲಾ ಜೊಂಡು ಹಬ್ಬಿತ್ತು. ಊರಿನ ಎಮ್ಮೆಗಳು ಬಿಸಲು ಅತಿಯಾದಾಗ ಬಂದು ಅದರಧಡದ ಕೆಸರಿನಲ್ಲಿ "ವಾಯ್" ಎಂದು ಒರಲುತ್ತ ಬಿದ್ದಿರುತ್ತಿದ್ದವು. ನನಗೆ ಪುರಸೊತ್ತು ಸಿಕ್ಕಾಗಲೆಲ್ಲ. ಅಲ್ಲೆ ನೆರಳಿನಲ್ಲಿ ಬಿದ್ದಿದ್ದ ನೇರಲು ಮರದ ಮೇಲೆ ಕುಳಿತು ಸುಮ್ಮನೆ ಕೆರೆ ದಡದಲ್ಲಿ ನಡೆಯುವ ನೂರಾರು ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದೆ. ಅಲ್ಲಿಗೆ ಹೋದ ಕೂಡಲೇ ಕಿವಿಮಾಡತ್ತಿದ್ದ ಮೊದಲ ಕೆಲಸ ಎಂದರೆ ದಡದಲ್ಲಿ ಕುಳಿತ್ತಿದ್ದ ಕೊಕ್ಕರೆಗಳನ್ನು ಅಟ್ಟಿಸಿಕೊಂಡು ಹೋಗುವುದು. ಕಿವಿಯ ಈ ಚೇಷ್ಟೆಯನ್ನು ತುಂಬ ದಿನದಿಂದ ನೋಡಿ ನೋಡಿ ಅಭ್ಯಾಸವಾಗಿದ್ದ ಕೊಕ್ಕರೆಗಳು. ಗಾಬರಿಯಾಗದೆ ಹಾರಿ ಎದುರಿನ ದಡಕ್ಕೆ ಹೋಗಿ ಕೂರುತ್ತಿದ್ದವು. ಕಣ್ಣಿಗೆ ಕಾಣುವಂತೆ ಕುಳಿತ ಅವನ್ನು ಬಿಡಬಾರದೆನ್ನುವ ಛಲದಲ್ಲಿ ಕಿವಿ ಇದೇ ಕೆರೆಯ ಜೊಂಡನ್ನೂ ಜವುಗನ್ನು ದಾಟಿ ಅವುಗಳಲ್ಲಿದ್ದಲ್ಲಿಗೆ ಹೋಗುವ ಹೊತ್ತಿಗೆ. ಅವು ಮತ್ತೆ ಹಾರಿ ಈ ಕಡೆಗೆ ಬಂದು ಬಿಡುತ್ತಿದ್ದವು. ಎರಡು ಮೂರು ಸಾರಿ ಹೀಗೆ ಮಾಡಿದರೆ ಸಾಕು ಸುತ್ತೀ ಸುತ್ತೀ ಸುಸ್ತಾದ ಕಿವಿ ಅವು ಏನಾದರೂ ಹಾಳಾಗಲಿ ಎಂದು ನಿರ್ಲಕ್ಷಿಸಿ ಏದುಸಿರು ಬಿಡುತ್ತಾ ನಾನಿದ್ದಲ್ಲಿಗೆ ಬಂದು ನೆರಳಲ್ಲಿ ಮಲಗಿ ಬಿಡುತ್ತಿತ್ತು.

ಯೋಚಿಸಿದರೆ ಈ ಕೊಕ್ಕರೆಗಳು ನೀರಿನಲ್ಲಿ ಮೀನುಗಳನ್ನು ಹೇಗೆ ಹಿಡಿಯುತ್ತವೆ ? ಎಂದು ಆಶ್ಚರ್ಯ ಆಗುತ್ತೆ. ಏಕೆಂದರೆ ಎರಡು ಕೈ ಮತ್ತು ಬೆರಳುಗಳಿರುವ ನಮಗೆ ಮೀನುಗಳನ್ನು ನೀರಿನಲ್ಲಿ ಹಿಡಿಯಲು ಸಾದ್ಯವೇ ಇಲ್ಲ. ಅಷ್ಟೊಂದು ನುಣುಪಾದ, ಮುಟ್ಟಿದರೆ ಜಾರಿ ಮೊಸಳುವ ಈ ಮೀನುಗಳನ್ನು ಹಿಡಿಯಲು ಕೊಕ್ಕರೆಗೆ ಇರುವ ಆಯುಧ ಸಾಧನಗಳಾದರೂ ಏನು? ಯೋಚಿಸಿ, ಕೇವಲ ಚಿಮ್ಮಟದಂತಿರುವ ಬಂದು ಕೊಕ್ಕ ಅಷ್ಟೇ, ನಾವು ಒಂದಲ್ಲಿ ಹತ್ತು ಚಿಮ್ಮಟಗಳನ್ನು ತಗೊಂಡು. ನಮ್ಮ ಜೀವಮಾನವೆಲ್ಲ ಪ್ರಯತ್ನಿಸಿದರೂ ಒಂದು ಮೀನನ್ನು ಹಿಡಿಯಲಾಗುವುದಿರಲಿ, ಸತ್ತ ಮೀನುಗಳನ್ನು ಸಹ ಚಿಮ್ಮಟದಿಂದ ಹಿಡಿಯಲು ಸಾಧ್ಯವಿಲ್ಲ. ಈ ಕೊಕ್ಕರೆಗಳಾದರೋ ಒಂಟಿಕಾಲಲ್ಲಿ ನಿಂತುಕೊಂಡು ನಿದ್ದೆ, ನಟಿಸುತ್ತ ಹತ್ತಿರ ಬಂದು ಮೀನುಗಳನ್ನು ಚಕ್ಕನೆ ಕೊಕ್ಕಿನಲ್ಲಿ ಹಿಡಿದು ಅವುಕೊಕ್ಕಿನ ತುದಿಯಲ್ಲಿ ಮಿಡುಕಾಡುತ್ತಿರಬೇಕಾದರೆ ನನ್ನ ಕಣ್ಣೆದುರೇ ಮಾತ್ರೆ ನುಂಗಿದಂತೆ ಗುಳಕ್ಕನೇ ನುಂಗಿ ಬಿಡುತ್ತಿದ್ದವು.

**I ನೀವು ಮೇಲಿರುವ ಗದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡಿರುವ ರೀತಿ, ಈ ಕೆಳಕಂಡ 4 ವಾಕ್ಯಗಳಲ್ಲಿ ಮೂರಕ್ಕೆ ಮಾತ್ರ ಸರಿಯೇ ತಪ್ಪೇ ತಿಳಿಸಿ :** 3 x 1 = 3

i) ಹಳೆಯ ಕೆರೆಯ ಸುತ್ತ ದಟ್ಟವಾದ ಗುಲಾಬಿ ಪೊದೆಗಳು ಬೆಳೆದಿರಲಿಲ್ಲ.

ii) ಲೇಖಕರು ಪುರುಸೊತ್ತು ಆದಾಗಲೆಲ್ಲ, ಕೆರೆಯ ದಡದ ಬಳಿ ಬದ್ದಿರುವ ನೇರಿಲು ಮರದ ಮೇಲೆ ಕುಳಿತು ಕೆರೆದಡದಲ್ಲಿ ನಡೆಯುವ ನೂರಾರು ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದರು.

iii) ಲೇಖಕರ ಜೊತೆಯಲ್ಲಿದ್ದ ನಾಯಿ ಕಿವಿ ದಡದಲ್ಲಿ ಕುಳಿತ್ತಿದ್ದ ಕೊಕ್ಕರೆಗಳನ್ನು ಅಟ್ಟಿಸಿಕೊಂಡು ಹೋಗುತ್ತಿತ್ತು.

iv) ಕಿವಿಯ ಚೇಷ್ಟೆಯಿಂದ ಕೊಕ್ಕರೆಗಳು ಗಾಬರಿಯಾಗುತ್ತಿರಲಿಲ್ಲ.

**2 ಈ ಕೆಳಕಂಡ ಪ್ರಶ್ನೆಗಳಿಗೆ ಒಂದು "ಪದದಲ್ಲಿ" ಉತ್ತರಿಸಿ. (ಮೂರಕ್ಕೆ ಮಾತ್ರ) :** 3 x 1 = 3

1. ಕೆರೆಯ ಅಂಚಿನಲ್ಲಿ ಏನು ಹಬ್ಬಿತ್ತು ?
2. ಎಮ್ಮೆಗಳು ಕೆಸರಿನಲ್ಲಿ ಏನೆಂದು ಒರಲುತ್ತ ಬಿದ್ದಿರುತ್ತಿದ್ದವು ?
3. ಮೀನನ್ನು ಹಿಡಿಯಲು ಇರುವ ಸಾಧನ, ಕೊಕ್ಕರೆಗೆ ಯಾವುದು ?
4. ನಾವು ಚಿಮ್ಮಟದಿಂದ ಏನ್ನನ್ನು ಹಿಡಿಯಲಾಗುವುದಿಲ್ಲ ?

**3 ಸರಿಯಾದ ಪದವನ್ನು ಆರಿಸಿ ಬರೆಯಿರಿ (ಯಾವುದಾದರೂ ಒಂದು) :** 1 x 1 = 1

1. "ನೆರಳು" ಈ ಪದದ ವಿರುದ್ಧ ಪದ

1) ಕತ್ತಲು

2) ಬೆಳಕು

3) ಮಧ್ಯಾಹ್ನ

4) ಸಂಜೆ

2. "ವೀಕ್ಷಿಸು" ಈ ಪದದ ಅರ್ಥ

1) ಗಮನಿಸು

2) ಓಡಿಸು

3) ಕೂರಿಸು

4) ಒರಗಿಸು

## <u>ವಿಭಾಗ –</u> ಬ (ಬರವಣಿಗೆ)

**4 ಈ ಕೆಳಗೆ ನೀಡಿರುವ ವಿಷಯವನ್ನು ಪರಾಮರ್ಶಿಸಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ :** 5 x 1 = 5

ನೀವು **"ರೂಪಶ್ರೀ"** ಬೆಂಗಳೂರಿನ ನಿವಾಸಿ ಎಂದು ಭಾವಿಸಿ ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೆ ಪ್ರವಾಸಿ ಸ್ಥಳಗಳಲ್ಲಿ ಅಂಗವಿಕಲರು ಮತ್ತು ಹಿರಿಯನಾಗರೀಕರು, ವಿವಿಧ ರೀತಿಯ ದೈಹಿಕ ಅಸಾಮರ್ಥ್ಯವುಳ್ಳವರು. ಇವರಿಗೆ ಉಂಟಾಗುವ ತೊಂದರೆಗಳ ಕುರಿತು, ಸಂಬಂದಪಟ್ಟವರು, ಗಮನ ಹರಿಸುವಂತೆ ಮಾಡಲು ಒಂದು ಪತ್ರ ಬರೆಯಿರಿ

**ಈ ಕೆಳಕಂಡ ಪ್ರಶ್ನೆಗಳಿಗೆ ಸರಿಯಾದ ಬದಲೀ ಉತ್ತರವನ್ನು ಆಯ್ಕೆ ಮಾಡಿರಿ :**

i) **ಈ ಪತ್ರಕ್ಕೆ ಸರಿಯಾದ ವಿಷಯವನ್ನು ಆರಿಸಿ**

ಅ) ದೈಹಿಕ ಅಸಾಮರ್ಥ್ಯವುಳ್ಳ ಜನರ ಗಮನವನ್ನು ಸೆಳೆಯಲು

ಆ) ದೈಹಿಕ ಅಸಾಮರ್ಥ್ಯವುಳ್ಳವರನ್ನು ಕಡೆಗಣಿಸಿರುವುದುದು ಅಥವಾ ತಪ್ಪು ತಿಳುವಳಿಕೆ ಹೊಂದಿರುವುದು?

ಇ) ಅಂಗವಿಕಲರು ಪ್ರವಾಸಿ ತಾಣಗಳಲ್ಲಿ ಎದುರಿಸುತ್ತಿರವ ಸಮಸ್ಯೆಗಳು

ಈ) ವಿವಿಧ ಅಸಮರ್ಥತೆಯುಳ್ಳ ವ್ಯಕ್ತಿಗಳಿಗೆ ಪ್ರವಾಸಿ ತಾಣಗಳಲ್ಲಿ ಉಂಟಾಗಿರುವ ಅನಾನುಕೂಲತೆ

ಅಥವಾ

ii) **ಈ ಕೆಳಕಂಡ ಅಪೂರ್ಣ ವಾಕ್ಯವನ್ನು ಸರಿಯಾದ ಆಯ್ಕೆಯಿಂದ ಪೂರ್ಣಗೊಳಿಸಿರಿ :**

**1) ನನ್ನ ಪತ್ರವು ........................................................ ಎಂದು ಭಾವಿಸುತ್ತೇನೆ.**

ಅ) ಜಾಗೃತಿಯನ್ನು ಮೂಡಿಸಲು ಸಹಾಯ ಮಾಡುತ್ತದೆ.

ಆ) ಪ್ರವಾಸದ ತಾಣಗಳ, ಎಲ್ಲಾ ಪ್ರಾಧಿಕಾರಿಗಳ ಬಗ್ಗೆ ಕ್ರಮ ಜರುಗಿಸಲು ದಾರಿ ನೀಡುತ್ತದೆ.

ಇ) ಪ್ರಜಾವಾಣಿ ದಿನ ಪತ್ರಿಕೆಯ ಪ್ರಸಾರದ ಹೆಚ್ಚಳಕ್ಕೆ.

ಈ) ಓದುಗರಿಂದ ಧನಾತ್ಮಕ ಫಲಿತಾಂಶವು ಸಿಗುತ್ತದೆ.

iii ) **ಈ ಪತ್ರಕ್ಕೆ ರೂಪಶ್ರೀ ಆಯ್ಕೆ ಮಾಡಿರುವ ಸಂಬಂಧಪಟ್ಟ ದೃಷ್ಟಿಕೋನ ಈ ರೀತಿ ಇದೆ.**

1) ದಿನ ಪತ್ರಿಕೆಯ ಹೆಸರು

2) ದಿನಪತ್ರಿಕೆಗೆ ನೀಡಿರುವ ಚಂದಾ ಹಣದ ವಿವರನ್ನು ಲಗತ್ತಿಸಿರುವುದು.

3) ರೂಪಶ್ರೀಯ ವಿಳಾಸ

4) ಔಪಚಾರಿಕ ಧ್ವನಿ

5)  ಪತ್ರ ಸ್ವೀಕರಿಸುವ ನಿರೀಕ್ಷಿತ ದಿನಾಂಕ

ಅ) 1 ಮತ್ತು 5

ಆ) 2, 3 ಮತ್ತು 4

ಇ) 3 ಮತ್ತು 5

ಈ) 1, 3 ಮತ್ತು 4

iv) **ದೈಹಿಕ ಅಸಾಮರ್ಥ್ಯವುಳ್ಳ ಅಂಗವಿಕಲರು ಎದುರಿಸುತ್ತಿರುವ ತೊಂದರೆಗಳನ್ನು ವಿವರಿಸಲು ರೂಪಶ್ರೀಯು ಯಾವುದನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.**

ಅ) ವೀಲ್‌ಚೇರ್ ಇಲ್ಲದೆ ಇರುವುದು ಮತ್ತು ಅಶುದ್ಧ ಶೌಚಾಲಯ

ಆ) ಪ್ರವಾಸದ ಮಾರ್ಗದರ್ಶಕರಿಗೆ ತರಬೇತಿ ಇಲ್ಲದೆ ಇರುವುದು ಮತ್ತು ಅನಿರ್ದಿಷ್ಟ ಭೇಟಿಯ ಅವಧಿ

ಇ) ತರಬೇತಿ ರಹಿತ ಪ್ರವಾಸಿ ಮಾರ್ಗದರ್ಶಕರು ಮತ್ತು ರ್‍ಯಾಂಪ್ ವೀಲ್ ಚೇರ್ ಇಲ್ಲದೆ ಇರುವುದು.

ಈ) ಅನಿರ್ದಿಷ್ಟಾವಧಿಯ ಭೇಟಿ ಸಮಯ ಮತ್ತು ಅಶುದ್ಧ ಶೌಚಾಲಯಗಳು.

v) **"ರೂಪಶ್ರೀಯು" ಅವರು ಅವರ ಪತ್ರದಲ್ಲಿ ಕೆಲವು ಸಲಹೆಗಳನ್ನು ಸೂಚನೆಗಳನ್ನು ಸಂಬಂಧಪಟ್ಟ ವಿಷಯದಲ್ಲಿ ಹಂಚಿಕೊಂಡಿದ್ದರು. ಅವರ ಸೂಚನೆಗೆ ಸಹಾಯವಾಗುವಂತೆ ಈ ಕೆಳಕಂಡಂತಹ ಸೂಕ್ತ ಆಯ್ಕೆಗಳನ್ನು ಮಾಡಲು ಸೂಚಿಸಿದೆ.**

A) ನನ್ನ ಅಭಿಪ್ರಾಯದಲ್ಲಿ ಮಾಧ್ಯಮಗಳು ಶಕ್ತಿಯುತ ಪಾತ್ರವಹಿಸಿ ಜನರಿಗೆ ಈ ಕೆಳಕಂಡ ವಿಷಯಗಳನ್ನು ಇ ವರ್ಗಾಯಿಸುತ್ತದೆ.

(a) ................................................................ ಮತ್ತು (b) ...................................................... ಪ್ರವಾಸಿ ಸ್ಥಳಗಳಲ್ಲಿ ದೈಹಿಕ ಅಸಾಮರ್ಥ್ಯವುಳ್ಳವರಿಗೆ, ಯಾವುದೇ ಸೌಲಭ್ಯಗಳನ್ನು ನೀಡದೆ ಕಡೆಗಾಣಿಸಿರುವ ಬಗ್ಗೆ ಸೂಚಿಸಿ. ಈ ಬಗ್ಗೆ ಮುಂದಿನ ದಿನಗಳಲ್ಲಿ ಸಕರಾತ್ಮಕ ಬದಲಾವಣೆಗಳನ್ನು ತರಲು ಸಹಾಯವಾಗಿದೆ.

ಅ) (a) ಪರಂಪರೆ ಮತ್ತು ನಂಬಿಕೆಗಳು (b) ಹಾಡುಗಳ ಸಂಯೋಜನೆ

ಆ) (a) ಗ್ರಹಿಕೆಗಳು ಮತ್ತು ಧೋರಣೆಗಳು (b) ಪ್ರಾಧಿಕಾರವನ್ನು ಜಾಗೃತಗೊಳಿಸುವುದು

ಇ) (a) ಆದ್ಯತೆ (b) ಪ್ರತಿಭಟನೆ

ಈ) (a) ಪ್ರತಿಕ್ರಿಯೆಗಳು (b) ಕನಿಷ್ಠ ಮಾಹಿತಿ ದೊರಕುವಂತೆ ಮಾಡುವುದು.

vi ) **ಈ ಪತ್ರದ ತೀರ್ಮಾನಕ್ಕೆ ಸರಿಯಾದ ಮತ್ತು ನ್ಯಾಯದೊರಕಿಸುವಂತಹ ಆಯ್ಕೆಯನ್ನು ಮಾಡಿರಿ :**

ನನ್ನ ಅಭಿಪ್ರಾಯದಲ್ಲಿ ಮಾಧ್ಯಮಗಳು ಜನರನ್ನು ಜಾಗೃತಗೊಳಿಸಿ. ಬಹಳ ಮಹತ್ವದ ಪತ್ರ ವಹಿಸುತ್ತದೆ.

1) ನನ್ನ ಆಲೋಚನೆಗಳು, ದಿನಪತ್ರಿಕೆಗಳಲ್ಲಿ ಪ್ರಕಟಣಗೊಂಡರೆ, ಇದರಿಂದ ಸಾರ್ವಜನಿಕರಲ್ಲಿ ಜಾಗೃತಿಯಾಗಿ ಬೆಂಬಲ ದೊರಕುವುದು.

2) ದಯವಿಟ್ಟು ನನ್ನ ಆಲೋಚನೆಗಳನ್ನು ನಿಮ್ಮ ದಿನಪತ್ರಿಕೆಯಲ್ಲಿ ಪ್ರಕಟಿಸುತ್ತೀರಾ ಎಂಬ ಭರವಸೆ ಇದೆ. ಸಂಬಂಧಪಟ್ಟ ಪ್ರಾಧಿಕಾರ, ಮುಂದಿನ ಕ್ರಮ ತೆಗೆದುಕೊಳ್ಳಬಹುದು.

ಅ) ಹೌದು, ಆಯ್ಕೆಗೆ (1) ಏಕೆಂದರೆ ಅಧಿಕೃತ ವಾಣಿಯಾಗಿದೆ.

ಆ) ಇಲ್ಲ ಆಯ್ಕೆಗೆ (1) ಏಕೆಂದರೆ ಮಾಹಿತಿ ಅನಾಪಚಾರಿಕ ವಾಣಿಯಾಗಿದೆ.

ಇ) ಹೌದು, ಆಯ್ಕೆಗೆ (2) ಏಕೆಂದರೆ ವಿನಮ್ರ, ನಿರೀಕ್ಷಾ ವಾಣಿಯಾಗಿದೆ.

ಈ) ಇಲ್ಲ : ಆಯ್ಕೆಗೆ (2) ಏಕೆಂದರೆ ಇದು ನಿಶ್ಚಿತ ವಾಣಿಯಾಗಿದೆ.

5) ಈ ಕೆಳಗೆ ಕೊಟ್ಟಿರುವ ಸಂದರ್ಭವನ್ನು ಪರಾಮರ್ಶಿಸಿ ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿ : 4 x 1 = 4

ಕರ್ನಾಟಕ ನೀರು ಸರಬರಾಜು ಮತ್ತು ಕೊಳಚೆ, ನಿರ್ಮೂಲನಾ ಮಂಡಳಿ, ಬೆಂಗಳೂರು, ಇವರು ಒಂದು ದಿನದ ಮಟ್ಟಿಗೆ. "ನೀರು ಸರಬರಾಜು ವ್ಯವಸ್ಥೆ"ಯನ್ನು ಸುಗಮಗೊಳಿಸಲು "ಲೈನು ದುರಸ್ತಿ" ಕಾಮಗಾರಿ ನಡೆಸಬೇಕಾಗಿರುವುದರಿಂದ "ಒಂದು ದಿನದ" ಮಟ್ಟಿಗೆ ನೀರು ಸರಬರಾಜು ವ್ಯವಸ್ಥೆಯನ್ನು ನಿಲ್ಲಿಸುವ ಸೂಚನೆಯನ್ನು ಏಪ್ರಿಲ್ – 08 ರಂದು ನೀಡಿರುತ್ತಾರೆ. ಇದು '8' ಗಂಟೆಯ ಅವಧಿಗೆ ಸಂಬಂಧಿಸಿದ (ಬೆಳಿಗ್ಗೆ 10–00 ರಿಂದ ಸಂಜೆ 6–00 ಗಂಟೆ) ಸೂಚನೆಯಾಗಿರುತ್ತದೆ.

i ) ಈ ಕೆಳಕಂಡ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆರಿಸಿ :

1) ಮೇಲ್ಕಂಡ ಬರಹಕ್ಕೆ ಸೂಕ್ತ 'ತಲೆಬರಹ'ವಬ್ಬಯ ಆರಿಸಿ.

ಅ) ಗಮನಿಸಿ/ಜಾಗೃತಿಸಿ

ಆ) ಒಂದು ದಿನದ ಮಟ್ಟಿಗೆ ನೀರನ್ನು ಸಂಗ್ರಹಿಸಿ

ಇ) ನೀರು ಸರಬರಾಜನ್ನು ನಿಲ್ಲಿಸುವಿಕೆ

ಈ)ನೀರು ಸರಬರಾಜು ಇರುವುದಿಲ್ಲ

ಅಥವಾ

ii ) ಸೂಕ್ತವಾದ ಅಂತ್ಯ ತೀರ್ಮಾನವನ್ನು ಮೇಲ್ಕಂಡ ಸೂಚನೆಗೆ ಗುರುತಿಸುವುದು.

ಅ) ಮಾಹಿತಿಯಲ್ಲಿರಿ

ಆ) ಸಹ–ಕಾರವನ್ನು ಕೋರಲಾಗಿದೆ.

ಇ) ಸಿದ್ಧರಾಗಿರಿ

ಈ) "ಅನಾನುಕೂಲತೆಗಾಗಿ ವಿಷಾದ"

iii ) ಕಾರ್ಯನಿರ್ವಾಹಕ ಅಭಿಯಂತರರು, ಸಲಹೆ–ಸೂಚನೆ ನೀಡುವ ಅಂಶಗಳನ್ನು ಆರಿಸಿರಿ :

ಅ) ನೀರಿನ ಸರಬರಾಜನ್ನು ಪರೀಕ್ಷಿಸಲು

ಆ) ನೀರಿನ ಬಳಕೆಗೆ, ಕಡಿವಾಣ ಹಾಕುವುದು

ಇ) ಒಂದು ದಿನದ ಮಟ್ಟಿಗೆ ನೀರಿನ ಸಂಗ್ರಹ

ಈ) ಮೇಲಿನ ಎಲ್ಲವೂ

iv ) ಸೂಚನೆಗೆ ಸಂಬಂಧಿಸಿದಂತೆ ಆಧಾರದ ಅಂಶಗಳನ್ನು ಗುರುತಿಸಿ :

ಅ) ನೀರಿನ ಸರಬರಾಜು ನಿಲ್ಲುವ ದಿನಾಂಕ

ಆ) ನೀರು ಸರಬರಾಜು ನಿಲ್ಲುವ ಅವಧಿ

ಇ) ನೀರು ಸರಬರಾಜು ನಿಲ್ಲಿಸುವ ಕಾರಣ

ಈ) ಮೇಲಿನ ಎಲ್ಲವೂ

v ) ಈ ಸೂಚನೆ ಕರ್ನಾಟಕ ನೀರು ಸರಬರಾಜು ಮಂಡಳಿಯ ಹೆಸರನ್ನು ಪ್ರತಿಬಿಂಬಿಸುತ್ತದೆಯೇ ?

ಅ) ಇಲ್ಲ, ಏಕೆಂದರೆ ಇಲ್ಲಿ ಸ್ಪಷ್ಟವಾದ ಹೆಸರಿದೆ

ಆ) ಹೌದು, ಏಕೆಂದರೆ ಇದು ಅನೌಪಚಾರಿಕ

ಇ) ಹೌದು, ಎಕೆಂದರೆ ಇದು ವಿತರಣಾ ಪ್ರಾಧಿಕಾರ

ಈ) ಇಲ್ಲ, ಏಕೆಂದರೆ ಇದು ಅಧಿಕೃತ ಸಹಿಯ ಮೂಲಕ ಬಂದಿದೆ ಎಂದು ಅರ್ಥೈಸುತ್ತದೆ.

6. ಈ ಕೆಳಕಂಡ ಪ್ರಶ್ನೆಗಳನ್ನು ಕೆಳಗೆ ನೀಡಿರುವ ಪಠ್ಯದ ಆಧಾರದ ಮೇಲೆ ನೀಡಲಾಗಿದೆ. ಪಠ್ಯವನ್ನು ಜಾಗೃತಿಯಿಂದ ಓದಿ ಪ್ರಶ್ನೆಗಳಿಗೆ ಉತ್ತರಿಸಿ : 4 x 1= 4

ರವಿಯು "ವನ್ಯಜೀವಿಗಳ ಸಂರಕ್ಷಣೆ ಮತ್ತು ಉಳಿವಿಗಾಗಿ ಹೋರಾಟ" ಈ ಶಾಲಾ ಕ್ಲಬ್‌ನ ಸದಸ್ಯರಲ್ಲಿ ಒಬ್ಬರು ಈ ಶಾಲಾ ಕ್ಲಬ್‌ನ ಉದ್ದೇಶ ವನ್ಯಜೀವಿಗಳ ರಕ್ಷಣೆ ಮತ್ತು ಪಾಲನೆಯಾಗಿರುತ್ತದೆ. ಪ್ರಾಣಿಗಳ ಹಿಂಸೆಯನ್ನು ತಡೆಗಟ್ಟುವುದು ಮತ್ತು ಮಾನವನ ಮತ್ತು ವನ್ಯಜೀವಿಗಳ ನಡುವೆ ಶಾಂತಿಯುತ ಸೌಹಾರ್ದಯುತ ಸಂಬಂಧವನ್ನು ಉಳಿಸುವುದು ಇದರ ಬಗ್ಗೆ ರವಿಯು ಲೇಖನವನ್ನು ಬರೆದಿರುತ್ತಾರೆ.

i ) ಈ ಕೆಳಕಂಡ ಸಲಹೆಗಳಲ್ಲಿ / ಸೂಚನೆಗಳಲ್ಲಿ ಯಾವುದು ರವಿಯ ಲೇಖನಕ್ಕೆ ಸೂಕ್ತವಾಗುತ್ತದೆ.

1) ಮಾನವನ ಮತ್ತ ವನ್ಯಜೀವಿಗಳ ನಡುವೆ ನಡೆಯುತ್ತಿರುವ ಸಂಘರ್ಷ ಕಡಿಮೆ ಮಾಡಿ. ಅವುಗಳ ಸ್ವಾಭಾವಿಕ ನೆಲೆಗೆ ದಕ್ಕೆಯಾಗದಂತೆ ಹೆಚ್ಚು ಹೆಚ್ಚು ವನ್ಯಜೀವಿಗಳನ್ನು ಸೃಷ್ಟಿಸುವುದು.

2) ಕಳ್ಳ ಭೇಟೆಗಾರರಿಗೆ ದಂಡವಿದಿಸಿ, ಪರಿಸರವನ್ನು ಸಂರಕ್ಷಿಸುವುದು.

3) ವನ್ಯಜೀವಿಗಳ ಹಕ್ಕುಗಳನ್ನು ಬಲಪಡಿಸುವುದು ಮತ್ತು ಊರ್ಜಿತಗೊಳಿಸುವುದು, ಜಾಗೃತಿ ಮೂಡಿಸುವುದು ಹಾಗೂ ಮಾನವನ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷಣೆಯನ್ನು ಕಡಿಮೆ ಮಾಡುವುದು.

4) "ವನ್ಯಜೀವಿ ಧಾಮಗಳ' ನ್ನು ಹೆಚ್ಚು ಹೆಚ್ಚು ಸ್ಥಾಪಿಸುವುದು ಹಾಗೂ ವನ್ಯಜೀವಿಗಳ ಬಗ್ಗೆ ಸಂಶೋಧನೆಯನ್ನು ಉನ್ನತೀಕರಿಸುವುದು.

ಅ) ಆಯ್ಕೆ – 1

ಆ) ಆಯ್ಕೆ – 2

ಇ) ಆಯ್ಕೆ – 3

ಈ) ಆಯ್ಕೆ – 4

ಅಥವಾ

ii ) ರವಿಯು ಲೇಖನಕ್ಕೆ ಈ ಕೆಳಕಂಡ ಪಟ್ಟಿಯಲ್ಲಿ ಸೂಕ್ತ ಹೆಸರನ್ನು ಗುರುತಿಸಿ :

ಅ) ಪ್ರಾಣಿ ಮತ್ತು ಮಾನವ : ಸಹ ಉಳಿವಿಗಾಗಿ ಹೋರಾಟ

ಆ) ಶಾಂತಿಯುತ – ಸಹ ಉಳಿವಿಗಾಗಿ ಹೋರಾಟ, ಭವಿಷ್ಯವನ್ನು ಮರು ರೂಪಿಸುವಿಕೆ

ಇ) ಪ್ರಭೇದಗಳನ್ನು ಸಂರಕ್ಷಿಸುವುದು ಮತ್ತು ಪುರ್ನವಸತೀಕರಣಗೊಳಿಸುವುದು

ಈ) ಸುಂದರ–ಚಲನೆಗಳು : ಉಳಿವಿಗಾಗಿ ಅರ್ಹತೆಯನ್ನು ಹೊಂದುವುದು

iii ) ರವಿಯವರಿಗೆ ಅವರ ಆದರ್ಶಗಳಿಗೆ ತಕ್ಕಂತೆ ಅವರ ಲೇಖನಕ್ಕೆ ಯಾವ ಆಯ್ಕೆಯು ಹೊಂದುತ್ತದೆ :

1) ಅನೇಕ ಪ್ರಸಂಗಗಳಲ್ಲಿ ಪ್ರಾಣಿಗಳನ್ನು ಹಿಂಸಿಸುವುದರ ಬಗ್ಗೆಗಿನ ಕಾರಣಗಳು ಮತ್ತು ಅದರ ಪರಿಣಾಮಗಳ ಬಗ್ಗೆ ಹಾಗೂ ಅವುಗಳ ಶಾಂತಿಯುತ ಉಳಿವಿಗಾಗಿ ಇದರ ಬಗ್ಗೆ ಇರುವ ಕಾಳಜಿ.

2) ಪ್ರಾಣಿಗಳ ಹಿಂಸಾಚಾರದ ಪರಿಣಾಮವನ್ನು ವಿವರಿಸುತ್ತ ಅವುಗಳ ಶಾಂತಿಯುತ ಉಳಿವಿಗಾಗಿ ಕಾಳಜಿ ವ್ಯಕ್ತಪಡಿಸಿ ಸಲಹೆ ನೀಡುವುದು.

3) ಲೇಖನದ ಉದ್ದೇಶವನ್ನು ಪರಿಚಯುಸುತ್ತ, ಪ್ರಾಣಿ ಸಂರಕ್ಷಣೆಯ ಬಗ್ಗೆಗಿನ ಕಾನೂನು ಮತ್ತು ನಿಯಮವನ್ನು ತಿಳಿಸುವುದು ಹಾಗೂ ಕಾನೂನಾತ್ಮಕವಾಗಿ ಪ್ರಾಣಿಗಳ ಶಾಂತಿಯುವ ಉಳಿವಿಗಾಗಿ ಸಲಹೆ, ಮಾರ್ಗದರ್ಶನ ನೀಡುವುದು.

4) ಪ್ರಾಣಿಗಳ ಸಂರಕ್ಷಣೆಯ ಬಗ್ಗೆ ಇರುವ ಕಾನೂನುಗಳನ್ನು ತಿಳಿಸುತ್ತ ಇದರ ಬಗ್ಗೆ ಕಾನೂನು ಎಷ್ಟು ಸಮರ್ಥವಾಗಿದೆ ಎಂದು ಪ್ರಶ್ನಿಸುತ್ತ ಅವುಗಳನ್ನ ಅಭಿವೃದ್ಧಿಗಾಗಿ ತಮ್ಮ ಲೇಖನದ ಉದ್ದೇಶವನ್ನು ವ್ಯಕ್ತಪಡಿಸಿದ್ದಾರೆ. ಸಲಹೆ ಮತ್ತು ಸೂಚನೆಗಳನ್ನು ನೀಡಿದ್ದಾರೆ.

ಅ) ಆಯ್ಕೆ – 1

ಆ) ಆಯ್ಕೆ – 2

ಇ) ಆಯ್ಕೆ – 3

ಈ) ಆಯ್ಕೆ – 4

iv ) ಈ ಲೇಖನ ಇದನ್ನು ಹೊಂದಿಲ್ಲ

ಅ) ಲೇಖನದ ಶಿರೋನಾಮೆ

ಆ) ಲೇಖನ ಬರೆದ ದಿನಾಂಕ

ಇ) ಲೇಖಕರ ಕಾಳಜಿ

ಈ) ಈ ವಿಷಯಕ್ಕೆ ಸಂಬಂಧಿಸಿದಂತಹವರ ಹೆಸರು

v ) ಈ ವಾಕ್ಯವನ್ನು ಓದಿ ರವಿಯ ಲೇಖನ ಬರಹಕ್ಕೆ ಸೂಕ್ತವಾದ ಆಯ್ಕೆಯನ್ನು ಮಾಡಿರಿ :

ಪ್ರಾಣಿಗಳು ಅವುಗಳ ಸ್ವಾಭಾವಿಕ ನಿವಾಸವನ್ನು ಪ್ರತಿನಿತ್ಯ ಹುಡುಕುತ್ತಾ, ಈಗ ದಿನೇದಿನೇ ಕುಗ್ಗುತ್ತಿವೆ. ಪ್ರಾಣಿಗಳು ಮತ್ತು ಮನುಷ್ಯರ ಒಡನಾಟ ಹೆಚ್ಚಿದೆ. ಆಗಾಗ್ಗೆ (1) ........................... ಮನುಷ್ಯರ ಜೊತೆ (2) .................. ಪ್ರಾಣಿಗಳಿಗೋಸ್ಕರ

ಅ) (1) ಮೋಜು (2) ಮಾರಕ ಪರಿಣಾಮಗಳು

ಆ) (1) ಭಯ (2) ದುರಂತ ಪರಿಣಾಮಗಳು

ಇ) (1) ಹಿಂಸೆ (2) ಕನಿಷ್ಠ ಪರಿಣಾಮ

ಈ) (1) ಸಂತೋಷ (2) ಅಪಾಯಕಾರಿ ಫಲಿತಾಂಶಗಳ ಹೊರಬರುವಿಕೆ

**ವ್ಯಾಕರಣ**

7. ಈ ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ಸೂಕ್ತವಾಕ್ಯಗಳನ್ನು ರಚನೆ ಮಾಡಿ (ಮೂರಕ್ಕೆ ಮಾತ್ರ) 3 x 1= 3

(ಅ) ಸಂಚಕಾರ (ಆ) ತಜ್ಞ (ಇ) ನಿವಾರಣೆ (ಈ) ಕ್ಷೇಮ

ಅಥವಾ

ಈ ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ಸೂಕ್ತವಾಕ್ಯಗಳನ್ನು ರಚನೆ ಮಾಡಿ (ಮೂರಕ್ಕೆ ಮಾತ್ರ)

| | | |
|---|---|---|
| 1) ಬೂರಿ ಭೋಜನ | ತುಪದ ಅನ | ಪಕಾನ |
| 2) ಪರಮಾನ, | ಉತಷವಾದ | ಸಹಿಯೂಟ |
| 3) ಹುಲು | ಮೊರೆಡಿಯಲಿ | ಹೆಬ್ಬಾವು |
| 4) ನಿಲೆಗೌಡ | ಕಾಡಿಗೆ ಹೆಜ್ಜೇನು | ಬೇಟೆಗೆ ಹೋದನು |

8. ಈ ಕೆಳಕಂಡ ಪದಗಳನ್ನು ಕೂಡಿಸಿ ಸಂಧಿ ಹೆಸರಿಸಿ 3 x 1= 3

1. ಅರುಣ + ಉದಯ ____________________

2. ಏಕ + ಏಕ ____________________

3. ಸಕಲ + ಐಶ್ವರ್ಯ ____________________

ಅಥವಾ

ಈ ಕೆಳಕಂಡ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ ತಳಿಸಿ

(ಅ) ಅತ್ಯಂತ (ಆ) ಇತ್ಯಾದಿ (ಇ) ಅತ್ಯವಸರ

9. ಈ ಕೆಳಕಂಡ ವಾಕ್ಯಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ : 3 x 1= 3

1. ಶಾಂತಿಯು ಬಡವಳಾಗಿ ಹುಟ್ಟಿದ್ದಳು : ಶಾಂತಿ – ಇದರ ವಚನ ರೂಪ

2. ಕೃಷ್ಣನು ಚೆನ್ನಾಗಿ ಭೋಜನ ಮಾಡುತ್ತಾನೆ

3. ರತ್ನ ವ್ಯಾಪಾರಿಯು ರೈಲಿನಲ್ಲಿ ಪ್ರಯಾಣಿಸುತ್ತಿದ್ದನು : ರೈಲಿನಲ್ಲಿ ಇದರ ವಿಭಕ್ತಿ ಪ್ರತ್ಯಯ

ಅಥವಾ

**ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ (ನಾಮಪದಗಳು):**

1) ಅಶೋಕವನದಲ್ಲಿ ................................... ದೇವಾಲಯವನ್ನು ಕಟ್ಟಿದ್ದಾರೆ.

(ಅ) ಭದ್ರಕಾಳಿಗೆ (ಆ) ಭದ್ರಕಾಳಿ (ಇ) ಭದ್ರಕಾಳಿಯು (ಈ) ಭದ್ರಕಾಳಿಯನ್ನು

2) ...................... ಆತ್ಮ ಲಂಕೆಯನ್ನು ಬಿಟ್ಟು ಹೋಗಲಾರದು.

(ಅ) ರಾವಣ (ಆ) ರಾವಣನ

3) ಒಂದು ದಿನದಲ್ಲಿ ಹತ್ತಾರು ದೇಶಗಳನ್ನೇ ಸುತ್ತಬಲ್ಲಂತಹ .............................. ಕಂಡುಹಿಡಿದಿದ್ದೇವೆ.

(ಅ) ವಿಮಾನಗಳು (ಆ) ವಿಮಾನ (ಇ) ವಿಮಾನಗಳನ್ನು (ಈ) ವಿಮಾನಕ್ಕೆ

**10) ಈ ಕೆಳಕಂಡ ಬಿಟ್ಟ ಸ್ಥಳಗಳನ್ನು ಸೂಕ್ತ ಕ್ರಿಯ ಪದಗಳಿಂದ ಭರ್ತಿ ಮಾಡಿ ನಾಲ್ಕಕ್ಕೆ ಮಾತ್ರ :** 4 x 1= 4

1) ರಾಮನು ಕಾಡಿಗೆ .......................................

2) ಹಳ್ಳಿಯು ಹಾಗೂ ಪಟ್ಟಣದ ಜನ ಕಂಪ್ಯೂಟರನ್ನು ................................

3) ಸೀತಾಳಿಗೆ ಹೃದಯದ ಶಸ್ತ್ರ ಚಿಕಿತ್ಸೆ .................................

4) ಕಾನನದ ಮಧ್ಯ ಸಿಂಹ ..............................

5) ಶಾಲಾ ಮಕ್ಕಳು ಒಂದು ದಿನದ ಪ್ರವಾಸವನ್ನು ..........................

**11) ಈ ಕೆಳಕಂಡ ವಾಕ್ಯದಲ್ಲಿರುವ ಲೇಖನ ಚಿಹ್ನೆಯನ್ನು ಗುರುತಿಸಿ : (ಎರಡಕ್ಕೆ ಮಾತ್ರ)** **2** x 1= 2

1) ಕಾರಮಕ್ಕ ಅಂದರೆ ಏನು ಗೌಡರೆ

2) ಪೆರುವಿನ ಪವಿತ್ರ ಕಣಿವೆಯಲ್ಲಿ

3) ಮುಂಜಾನೆಯಿಂದ ಮಲಗುವ ತನಕ ಜೀವನ ಮೂಢನಂಬಿಕೆಗಳ ಮಯವಾಯಿತು. ಯಾವ ದಿಕ್ಕಿಗೆ ಮಲಗಬೇಕು

## ಸಾಹಿತ್ಯ

**12) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ : (ಯಾವುದಾದರೂ ಮೂರಕ್ಕೆ ಮಾತ್ರ)** **3** x 1= 3

1) ನಿಮ್ಮ ದಾನವನುಂಡು ಅನ್ಯರ ಹೊಗಳುವ .............................. ರಾಮನಾಥ

(ಕುನ್ನಿಗಳನೇನೆಂಬೆ, ಆನೆಗಳನೇನೆಂಬೆ, ಕೋಳಿಗಳನೇನೆಂಬೆ, ಕುರಿಗಳನೇನೆಂಬೆ)

2) ನುಡಿದಂತೆ, ನಡೆಯದಿದ್ದಡೆ ...................... ಒಲಿಯನು.

(ಗುಹೇಶ್ವರ, ಕೂಡಲಸಂಗಮದೇವ, ಚನ್ನಮಲ್ಲಿಕಾರ್ಜುನ, ಕಪಿಲಸಿದ್ದಮಲ್ಲಿಕಾರ್ಜುನ)

3) ತುಂಬಿದ ಹೊಳೆಯಾಗೆ ......................... ಕಾಣಿಸುತ್ತವೆ.

(ಅ) ಕೊಂಬು (ಆ) ಕಾಲು (ಇ) ಬಾಲ (ಈ) ಕಿವಿ

4) ಗುರುವಿಂದ ........................ ಉಂಟೆ ಸರ್ವಜ್ಞ

(ಅ) ತಂದೆ (ಆ) ಸ್ನೇಹಿತರು (ಇ) ಬಂಧುಗಳು (ಈ) ತಾಯಿ

**13) ಸರಿಯೋ ಅಥವಾ ತಪ್ಪೋ ತಿಳಿಸಿ (ಮೂರಕ್ಕೆ ಮಾತ್ರ) :** **3** x 1= 3

1) ತ್ರಿಪದಿ ಪದ್ಯದ ರಚನೆಕಾರರು – ಕನಕದಾಸರು

2) ಜಾಣಂಗೆ ಮುನಿಸಿಲ್ಲ – ಕೋಣಕ್ಕೆ ಮತಿಯಿಲ್ಲ

3) ಪ್ರೀತಿಗೆ ಜೀವವಿದೆ – ಅದೊಂದು ನಿರಂತರ ಕ್ರಿಯೆ

4) ಬಸವಣ್ಣ ನಂಬಿಕೆಯಲ್ಲಿ ದುಡಿಯುವುದಿಲ್ಲ

**14) ಈ ಕೆಳಕಂಡ ಗದ್ಯವನ್ನು ಓದಿರಿ ಹಾಗೂ ಕೆಳಕಂಡ ವಾಕ್ಯಗಳಲ್ಲಿ ಬಿಟ್ಟ ಸ್ಥಳವನ್ನು ತುಂಬಿರಿ (ಮೂರಕ್ಕೆ ಮಾತ್ರ):**

**3** x 1= 3

ಕಥಾನಾಯಕನ ತಂದೆ ಆಚಾರವಂತರು ಮತ್ತು ವರದಕ್ಷಿಣೆ ವಿರೋಧಿ. ಮಗನು ಮಹತ್ವಾಕಾಂಕ್ಷೆವುಳ್ಳವನಾಗಿದ್ದನು. ಮದುವೆಗೆ ಸಂಬಂಧಿಸಿದಂತೆ ಕಥಾನಾಯಕ ಆತನ ತಂದೆಯ ಮತ್ತು ತಂಗಿಯ ಅಭಿಪ್ರಾಯಗಳು ಬೇರೆ ಬೇರೆ ಯಾಗಿದ್ದವು. ವಿದ್ಯಾಭ್ಯಾಸಕ್ಕಾಗಿ ವರದಕ್ಷಿಣೆ ತೆಗೆದುಕೊಡುವ ಅಣ್ಣನ ದೋರಣೆಗೆ ತಂಗಿಗೆ ಒಪ್ಪಿಗೆಯಾಗಿರಲಿಲ್ಲ.

1) ಕಥಾನಾಯಕನ ತಂದೆ ........................ ಆಗಿದ್ದರು.

2) ಕಥಾನಾಯಕನು ........................... ಉಳ್ಳವನಾಗಿದ್ದನು.

3) ಕಥಾನಾಯಕನ ತಂಗಿಯ ಧೋರಣೆ ಆತನ ವಿದ್ಯಾಭ್ಯಾಸದ ವಿಷಯದಲ್ಲಿ .......................... ಆಗಿತ್ತು.

4) ಕಥಾನಾಯಕನ ಧೋರಣೆ ......................... ಆಗಿತ್ತು.

**15) ಈ ಕೆಳಕಂಡ ಗದ್ಯವನ್ನು ಓದಿ ಈ ಕೆಳಕಂಡ ವಾಕ್ಯಗಳು ಸರಿಯೇ ತಪ್ಪೇ ಅಂತ ತಿಳಿಸಿ ಮೂರಕ್ಕೆ ಮಾತ್ರ :3** x 1= 3

ಕಂಪ್ಯೂಟರ್, ದೂರಸಂಪರ್ಕ ಮಾಧ್ಯಮ, ತಂತ್ರಜ್ಞಾನದೊಡನೆ ಜೋಡಣೆಯಾಗಿ ನಮ್ಮ ಬದುಕಿನಲ್ಲಿ ಹಾಗೂ ಜೀವನ ವಿಧಾನದಲ್ಲಿ ಆಗಾಗ ಬದಲಾವಣೆಯನ್ನು ತರುತ್ತಿದೆ. ಕಂಪ್ಯೂಟರ್ ಹಾಗೂ ದೂರ ಸಂಪರ್ಕ ಮಾಧ್ಯಮಗಳು ಅಭಿವೃದ್ಧಿಗೊಂಡಂತೆ 'ಕೆಲಸ ಉದ್ಯೋಗ' ದ ವಿಚಾರಗಳಿಗೆ ತೀವ್ರವಾಗಿ ಬದಲಾಗಿದೆ ಇಂದು ಎಷ್ಟೋ ಮಂದಿ 'ಉದ್ಯೋಗಸ್ಥರು' ಕಛೇರಿಗಳಿಗೆ ಹೋಗದೆ ಮನೆಯಿಂದಲೆ ಕೆಲಸ ಮಾಡುತ್ತಿದದಾರೆ. ದೂರವಾಣಿ ಮೂಲಕ ಇವರ ಮನೆಯಲ್ಲಿನ ಕಂಪ್ಯೂಟರ್‌ಗೆ ಸಂಪರ್ಕ ಏರ್ಪಡಿಸಲಾಗಿದೆ. ಇದನ್ನು 'ಟೆಲಿಕಮ್ಯೂಟಿಂಗ್' ಎನ್ನುತ್ತಾರೆ. ಭಾರೀ ವೇಗದಲ್ಲಿ ಬಾರೀ ಮಾಹಿತಿಯನ್ನು ರವಾನಿಸಬಲ್ಲ ಸಂಪರ್ಕ ವ್ಯವಸ್ಥೆ ಹಾಗೂ ಕಂಪ್ಯೂಟರ್‌ಗಳು ಸಾಮಾನ್ಯವಾದಂತೆ ಕಛೇರಿಗಳಿಗೆ ಹೋಗಿ ಕೆಲಸ ಮಾಡುವ ಅಗತ್ಯವೇ ಉಳಿಯುವುದಿಲ್ಲ. ಮನೆಯಿಂದಲೆ ಮನೆಯಲ್ಲಿ ಕುಳಿತಂತೆ ಯಾವುದೇ ಮಾಹಿತಿಯನ್ನು ರವಾನಿಸಬಹುದು. ಬೆಳಿಗ್ಗೆ ಏಳಕ್ಕೆ ಕಾರ್ಖಾನೆಯ ಬಸ್ಸು ಹಿಡಿದು ಸಂಜೆ ಆರು ಗಂಟೆಗೆ

ಹಿಂತಿರುಗುವ ವಾರಕ್ಕೆ ಆರು ದಿನ, ದಿನವೆಲ್ಲ ಕೆಲಸದಲ್ಲಿ ಕಳೆವ ಕೈಗಾರಿಕೆ ಕ್ರಾಂತಿಯ ಫಲವಾದ ನಮ್ಮ ಜೀವನ ಶೈಲಿಯನ್ನು ಎಲೆಕ್ಟ್ರಾನಿಕ್ಸ್ ಯುಗ ಬದಲಿಸಿದೆ. ಆತ್ಯಾಧುನಿಕ ಸಂಪರ್ಕ ಮಾಧ್ಯಮಗಳು ಎಲೆಕ್ಟ್ರಾನಿಕ್ ಸಮುದಾಯವನ್ನು ಸೃಷ್ಟಿಸುತ್ತವೆ.

1) ಕಂಪ್ಯೂಟರ್ ದೂರಸಂಪರ್ಕ ಮಾಧ್ಯಮ ತಂತ್ರಜ್ಞಾನದೊಡನೆ ಜೋಡಣೆಯಾಗಿಲ್ಲ.

2) ಕೈಗಾರಿಕಾ ಕ್ರಾಂತಿಯು ಫಲವಾದ ನಮ್ಮ ಜೀವನ ಶೈಲಿಯನ್ನು 'ಎಲೆಕ್ಟ್ರಾನಿಕ್ಸ್' ಯುಗ ಬದಲಿಸಿದೆ.

3) ದೂರವಾಣಿ ಮೂಲಕ ಮನೆಯಲ್ಲಿನ ಕಂಪ್ಯೂಟರ್‌ಗೆ ಸಂಪರ್ಕ ಕಲ್ಪಿಸಲು ಸಾಧ್ಯವಿಲ್ಲ.

4) ಕಂಪ್ಯೂಟರ್ ಹಾಗೂ ದೂರ ಸಂಪರ್ಕ ಮಾಧ್ಯಮಗಳು ಅಭಿವೃದ್ಧಿಗೊಂಡಂತೆ ಉದ್ಯೋಗದ ವಿಚಾರಗಳು ತೀವ್ರವಾಗಿ ಬದಲಾಗಿದೆ.

**16) ಹೊಂದಿಸಿ ಬರೆಯಿರಿ :** **3** x 1= 3

| ಅ | ಆ |
|---|---|
| 1) ಹೆಜ್ಜೇನು | ಗೊಂಬೆ |
| 2) ಕಾರಯ | ಬಿಲ್ಲಯ್ಯ |
| 3) ರಾಕಾಶಿ | ಸಮಾಸಪದ |

ಅಥವಾ

| ಅ | ಆ |
|---|---|
| 1) ಗುರು | ಅಂಧಕ |
| 2) ಹಗಲಲ್ಲಿ | ಹಾವು |
| 3) ಹುತ್ತ | ಬಂಧು |

**ವಿಭಾಗ – 'ಬಿ'**

ಸೂಚನೆ : ಎಲ್ಲಾ ಪ್ರಶ್ನೆಗಳಿಗೂ ಕಡ್ಡಾಯವಾಗಿ ಉತ್ತರಿಸಿ : (ಆಂತರಿಕ ಆಯ್ಕೆಯ ಪ್ರಶ್ನೆಯನ್ನು ಬಿಟ್ಟು)

**ವಿಭಾಗ : ಓದುವಿಕೆ**

**ಈ ಕೆಳಕಂಡ ಗದ್ಯಭಾಗವನ್ನು ಎಚ್ಚರಿಕೆಯಿಂದ ಓದಿ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ :**

ಸತ್ಯಾಗ್ರಹದಿಂದಲೆ ಸ್ತ್ರೀಜನ ಸಮಸ್ಯೆಗೆ ನನ್ನ ಸೇವೆ ಮೊದಲಾಯಿತು ಎಂದಿದ್ದಾರೆ ಗಾಂಧೀಜಿ, ಹಳ್ಳಿಯ ಹೆಂಗಸರಿಗೆ ಹಿಂದೆ ಅವರು ಯಾವಾಗಲೂ ಕಂಡು ಅರಿಯದ ಭಕ್ತಿ ಗೌರವಗಳನ್ನು ಕೊಟ್ಟಿತ್ತು. ಸತ್ಯಾಗ್ರಹ. ಉಪ್ಪಿನ ಸತ್ಯಾಗ್ರಹ ಸಾವಿರಾರು ಜನ ಹೆಂಗಳೆಯರನ್ನು ಅವರ ಗವಿಗಳಿಂದ ಹೊರಬರಲು ಗಂಡಸಿನೊಡನೆ ಸರಿಸಮನಾಗಿ ಬೆರೆಯಲು ಮತ್ತು ದೇಶ ಸೇವೆ ಮಾಡಲು ಪ್ರೇರೇಪಿಸಿತು. ನಿಜವಾಗಿಯೂ ಹಿಂದೂಸ್ಥಾನದ ಹೆಂಗಸರ ಮೋಕ್ಷ ಸತ್ಯಾನುಗ್ರಹದಿಂದ ಆದ ಹಾಗೆ ಮತ್ತಾವುದರಿಂದಲೂ ಆಗಿಲ್ಲ. ಕಾಂಗ್ರೆಸ್ಸಿನಲ್ಲಿ ನಿರ್ಭಯವಾಗಿ ಓಡಾಡುವ ನಾನಾ ಪ್ರಾಂತಗಳ ಕೇಸರಿ ಬಣ್ಣದ ಸ್ವಯಂ ಸೇವಕಿಯರೇ ಅದಕ್ಕೆ ಸಾಕ್ಷಿ. ಗಾಂಧೀಜಿ ಹೇಳಿದುದು ಅಭಿಮಾನದ ಮಾತಲ್ಲ. ಸತ್ಯಾಗ್ರಹ ನಮ್ಮ ಹೆಂಗಸರಿಗೆ ಹೊಸದೊಂದು ಶಕ್ತಿ ದೃಷ್ಟಿಕೊಟ್ಟಿತು. ಅದರಲ್ಲಿ ಪ್ರಧಾನ ಮಾತ್ರ ವಹಿಸಲು ಹೆಂಗಸಿನ ಶಕ್ತಿ ಶಾಂತಿ, ಸ್ಥೈರಣೆ, ಸತ್ಯ ನಿರ್ಭಯಗಳು ರಾಮಬಣವಾದುವು. ಆಕೆಯ ಸ್ವಭಾವಕ್ಕೆ ಹಿಂಸೆ ಕೇವಲ ರಾಕ್ಷಸಗುಣ. ಆ ದಾರಿ ಆಕೆಯದಲ್ಲ. ಪರರಿಗಾಗಿ ದುಃಖ ನುಂಗುವುದು, ಜಗದಿಷ್ಠಾರ್ಥಕ್ಕಾಗಿ ಆತ್ಮತ್ಯಾಗ ಮಾಡುವುದು ಆಕೆಯ ದಾರಿ. ಆಕೆಯ ಪ್ರಕೃತಿಯೇ ಅದನ್ನು ಆಕೆಗೆ ಕಲಿಸಿದೆ. ಮಕ್ಕಳನ್ನು ಹೆತ್ತು ಸಲಹುವುದು ಆಕೆಯ ಶರೀರ ಧರ್ಮ ಅಂತಹವಳಿಗೆ ಸತ್ಯಾಗ್ರಹದ ತತ್ವವೇಕೆ ಆಚರಣೆಯೋ ಮುಖ್ಯವಾಗುತ್ತದೆ. ಜಗತ್ತಿನಲ್ಲಿ ಕಾಲಿಟ್ಟ ಪ್ರತಿಯೊಂದು ಮಗುವೂ ಆಕೆಯ ಸಹನೆಯ ಹೂವು. ಆತ್ಮ ತ್ಯಾಗದ ಸೋಂಪಿಯ ತಪಸ್ಸು. ಬಾಲ್ಯದಲ್ಲಿ ಮಗುವನ್ನು ಬೆಳಿಸುವಾಗ ಸಾವಿರ ಸಂದರ್ಭಗಳಲ್ಲಿ ಆ ವ್ರತದ ಕಠಿಣ ಪರಿಕ್ಷೆಯಾಗುತ್ತದೆ. ನಮಗಾಗಿ ನಮ್ಮಲ್ಲಿ ಅವರು ಇಟ್ಟ ಪ್ರೀತಿಗಾಗಿ ಆ ಕಷ್ಟನಷ್ಟಗಳನ್ನು ಅವರು ಸೋಸುತ್ತಾರೆ. ಅದರಂದೆ ನಾವು ಮಾನವ ಕೋಟಿಯ ದುಃಖ ನಿವಾರಣೆಗಾಗಿ ಸಂತೋಷದಿಂದ ಸಮರ್ಪಣ ದೃಷ್ಟಿಯಿಂದ ದುಃಖಪಾನದ ವ್ರತ ಹಿಡಿಯಬೇಕೆಂಬುದೇ ಸತ್ಯಾಗ್ರಹದ ಸಂದೇಶ. ಈ ದಾರಿಯಲ್ಲಿ ಹೆಂಗಸು ಗಂಡಸಿರಿಗಿಂದ ಹೆಂಗಸರು ಶತಯೋಜನ ದೂರ ಮುಂದೆ ಹೋಗಿದ್ದಾರೆ.

**ಮೇಲ್ಕಂಡ ಗದ್ಯವನ್ನು ಓದಿ ಅರ್ಥ ಮಾಡಿಕೊಂಡು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ :**

17) ಸ್ತ್ರೀ ಜನ ಸಮಸ್ಯೆಗೆ ಗಾಂಧೀಜಿಯವರು ಎಲ್ಲಿಂದ ಸೇವೆಯನ್ನು ಆರಂಭಿಸಿದರು ? 2

ಅಥವಾ

18) ಉಪ್ಪಿನ ಸತ್ಯಾಗ್ರಹ ಸಾವಿರಾರು ಸ್ತ್ರೀಯರಿಗೆ ಏನನ್ನು ಕಲಿಸಿತು ?

19) ಸತ್ಯಾಗ್ರಹದಲ್ಲಿ ಪ್ರಧಾನ ಪಾತ್ರ ವಹಿಸಲು ಹೆಂಗಸರಿಗೆ ರಾಮಬಣವಾದವು ಯಾವುವು ? 2

ಅಥವಾ

20) ಹೆಂಗಸರ ಮೋಕ್ಷಕ್ಕೆ ಯಾವುದು ಕಾರಣವಾಯಿತು ? ಅದಕ್ಕೆ ಸಾಕ್ಷಿ ಯಾವುದು ?

21) ಸ್ತ್ರೀಯ ಸಹಜ ಸ್ವಭಾವ ಯಾವುದು ? 2

22) ಈ ಕೆಳಕಂಡ ಪದಗಳ ಅರ್ಥವನ್ನು ಬರೆಯಿರಿ : 2

(ಅ) ದುಃಖಪಾನದ ವ್ರತ (ಆ) ಶತಯೋಜನ ದೂರ

## ಭಾಗ – ಬಿ : ಬರವಣಿಗೆ

23) ನೀವು ಸುರೇಶ/ಸುಮತಿ, ರಾಣಿ ಚೆನ್ನಮ್ಮ ವಸತಿ ಶಾಲೆ, ಬೆಳಗಾಂ ಇಲ್ಲಿ ವ್ಯಾಸಂಗ ಮಾಡುತ್ತಿರುವಿರಿ ಎಂದು ಭಾವಿಸಿ ಆಂಗ್ಲ ಭಾಷೆ ನಿಘಂಟುವಿನ 5 ಪ್ರತಿಗಳನ್ನು ಕಳುಹಿಸಿ ಕೊಡಬೇಕೆಂದು ಕೋರಿ, ಸುಬಾಷ್ ಬುಕ್ ಸ್ಟೋರ್, ಅವಿನ್ಯೂರೋಡ್, ಬೆಂಗಳೂರು–02 ಇವರಿಗೆ ಒಂದು ಪತ್ರ ಬರೆಯಿರಿ 1 x 4= 4

ಅಥವಾ

ಜಯರಾಂ ಎಂದು ಭಾವಿಸಿ ಬಿ.ಎ. ಪದವಿ ಪಡೆದವರೆಂದು ಭಾವಿಸಿಕೊಂಡು, ಆರೋಗ್ಯ ಸಹಾಯಕರು ಹುದ್ದೆಗೆಂದು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆನಂದರಾವ್, ಸರ್ಕಾರ, ಬೆಂಗಳೂರು. ಇವರ ವಿಳಾಸಕ್ಕೆ ಭರ್ತಿಗೊಳಿಸಿದ ಅರ್ಜಿಯನ್ನು ಸಲ್ಲಿಸಿ.

24) ಈ ಕೆಳಕಂಡ ದೂರವಾಣಿ ಸಂಭಾಷಣೆಯನ್ನು ಓದಿ : 2

ದೂರವಾಣಿ : ನಾನು ಶ್ರೀ ನಾಗರಾಜ ಅವರ ಹತ್ತಿರ ಮಾತನಾಡಬಹುದಾ ನಾನು ಶರತ್ ಎಸ್. ಇನಫ್ಲೀ ಟೆಕ್ನೋ ಕಂಪನಿಯಂದು

ಸುಜಾತ : ಕ್ಷಮಿಸಿ ಅವರು ಅತಿಥಿಗಳ ಜೊತೆ ಹೊರಗಡೆ ಹೋಗಿದ್ದಾರೆ. ನಾನು ಅವರ ಮಗಳು

ದೂರವಾಣಿ ಕರೆ : ಸುಜಾತ ನಿಮ್ಮ ತಂದೆಯವರು ಬೆಂಗಳೂರಿನಲ್ಲಿ ಒಂದು ಸಭೆಗೆ ಹಾಜರಾಗಬೇಕಿದೆ. ಆದರೆ ಆ ಸಭೆ ಮುಂದೂಡಲ್ಪಟ್ಟಿದೆ. ದಯವಿಟ್ಟು ಅವರಿಗೆ ಇದನ್ನು ತಿಳಿಸಿ. ಅವರು ಸಭೆಯ ದಿನಾಂಕವನ್ನು ಬದಲಾಯಿಸಲು ಹಾಗೂ ಅವರ ವಿಮಾನ ಪ್ರಯಾಣವನ್ನು ರದ್ದುಗೊಳಿಸಲು ಸಹಾಯವಾಗುತ್ತದೆ.

ಸುಜಾತ : ಶರತ್ ರವರೆ ನಾನೂ ಅಗತ್ಯವಾಗಿ ಮಾಡುತ್ತೇನೆ

ನೀವು ಸುಜಾತ ಎಂದು ಭಾವಿಸಿ ನಿಮ್ಮ ತಂದೆ ಬರುವ ವೇಳೆಗೆ ನೀವು ಮನೆಯಲ್ಲಿರುವುದಿಲ್ಲ. ಅವರಿಗೆ ಮಾಹಿತಿಯನ್ನು ಮೇಜಿನ ಮೇಲೆ ಬರೆದಿಡಿ.

25) **'ನಮ್ಮ ತೋಟ'** ವಿಷಯದ ಬಗ್ಗೆ ವಾಕ್ಯವೃಂದ ರಚಿಸಿ. 6

ಅಥವಾ

ನೀವು ಸ್ನೇಹ/ಶರತ್ ಎಂದು ಭಾವಿಸಿ ಬೆಳಗಿನ ನಡಿಗೆ ಇದರ ಮಹತ್ವ ಕುರಿತು ಒಂದು ಪ್ರಬಂಧ ಬರೆಯಿರಿ. ಈ ಕೆಳಕಂಡ ಅಂಶಗಳನ್ನು ಸುಳುಹುಗಳನ್ನು ಆಧರಿಸಿ ಪ್ರಬಂಧ ಬರೆಯಿರಿ.

1) ನಿಮ್ಮನ್ನು ಬೆಳಿಗ್ಗೆ ಬೇಗ ಏಳಲು ಸಹಾಯ ಮಾಡುವುದು.

2) ಶುದ್ಧವಾದ ಆಮ್ಲಜನಕ ಸೇವನೆ.

3) ನಿಮ್ಮ ದೇಹದಲ್ಲಿ ರಕ್ತ ಪರಿಚಲನೆ ಸುಗಮವಾಗುತ್ತದೆ.

4) ಇಡೀ ದಿವಸ ಚೈತನ್ಯಯುತವಾಗಿರುತ್ತದೆ. ಬೆಳಗಿನ ಉಪಹಾರ ಸೇವನೆಗೆ ಹಸಿವುಂಟಾಗುತ್ತದೆ.

5) ಓದಲು ಉತ್ತಮ ಸಹಾಯ ದೊರೆಯುತ್ತದೆ.

6) ಎಲ್ಲಾ ದಿನಗಳು ಕ್ರಿಯಶೀಲವಾಗಿರುತ್ತದೆ.

**ವಿಭಾಗ – ಸಿ : ವ್ಯಾಕರಣ**

26) **"ನುಡಿದರೆ ಮುತ್ತಿನ ಹಾರದಂತಿರಬೇಕು"** ಈ ವಾಕ್ಯದಲ್ಲಿನ ಅಲಂಕಾರವನ್ನು ವಿವರಿಸಿ ಹಾಗೂ ಅಲಂಕಾರವನ್ನು ಹೆಸರಿಸಿ. 2

27) **ಸಂಸ್ಕೃತ ಪದಕ್ಕೆ ಕನ್ನಡ ಪದ ಬರೆಯಿರಿ : (ಎರಡಕ್ಕೆ ಮಾತ್ರ)** 2 x 1 = 2

1) ಮೃಗ (2) ಹಂಸ (3) ಮುತ್ತು (4) ಕೋಕಿಲೆ

28) **ಕೊಟ್ಟಿರುವ ಪದಗಳ ವಿಗ್ರಹ ವಾಕ್ಯ ಮಾಡಿ ಸಮಾಸ ಹೆಸರಿಸಿ : (3ಕ್ಕೆ ಮಾತ್ರ)**

1) ತಲೆನೋವು

2) ಕೈಕಾಲು

3) ಹೆಜ್ಜೇನು

4) ಪರೀಕ್ಷಾವರು

29) **ಬಿಟ್ಟ ಸ್ಥಳವನ್ನು ಸೂಚನೆಗನುಗುಣವಾಗಿ ಭರ್ತಿಮಾಡಿ :** **4** x 1 = 4

1) ಅತ್ಯಗತ್ಯ ಎಂಬುದು .................................. ಸಂಧಿಗೆ ಉದಾಹರಣೆ.

2) 'ಚಿಕಿತ್ಸೆ' ಈ ಪದಕ್ಕೆ ದ್ವಿತೀಯ ವಿಭಕ್ತಿ ಪ್ರತ್ಯಯ ಸೇರಿಸಿದಾಗ ........................ ಆಗುತ್ತದೆ.

3) ಅತ್ಯಂತ : ಯಣ್ ಸಂಧಿ ಆಗಿದೆ. 'ಧೀರ್ಘಾವಧಿ .......................... ಸಂಧಿ ಆಗಿದೆ.

4) ಭೂಮಿಯಲ್ಲಿ ಇಲ್ಲಿರುವ ........................... ವಿಭಕ್ತಿ ಪ್ರತ್ಯಯದ ಹೆಸರು .......................... ಆಗಿದೆ

30) **ಈ ಕೆಳಕಂಡ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ :** **4** x 1 = 4

ಅ) ತಲೆನೋವು, ಸಹಾಯ, ಆಸ್ಪತ್ರೆ, ಮನೆಯನ್ನು

ಆ) ಸೂರ್ಯ, ಚಂದ್ರ, ನಕ್ಷತ್ರ, ನೀರು

ಇ) ಕಾಡು, ವನ್ಯಜೀವಿ, ಕಾಡಿನ ಉತ್ಪನ್ನ, ಮೋಡ

ಈ) ರಾಗಿ, ಭತ್ತ, ಜೋಳ, ತೊಗರಿಬೇಳೆ

**ವಿಭಾಗ – ಡಿ : ಸಾಹಿತ್ಯ**

31) **ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯದಲ್ಲಿ ಉತ್ತರಿಸಿ : (ಮೂರಕ್ಕೆ ಮಾತ್ರ)** **3** x 2 = 6

1) ಬಿತ್ತನೆ ಹೇಗಿರಬೇಕು? ಬಸವಣ್ಣ ಯಾರು ?

2) ಲೋಕದೊಳಗೆ ಹುಟ್ಟಿದ ಬಳಿಕ ಹೇಗಿರಬೇಕೆಂದು ಅಕ್ಕಮಹಾದೇವಿ ತಿಳಿಸಿದ್ದಾರೆ ?

3) ಗರತಿ ತನ್ನ ಕಂದ ಹೇಗಿರಬೇಕೆಂದು ಬಯಸುತ್ತಾಳೆ ?

4) ಪ್ರೀತಿ ಚಿರಪರಿಚಿತವಾದುದು ಹೇಗೆ ?

32) **ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯದಲ್ಲಿ ಉತ್ತರಿಸಿ : (ಮೂರಕ್ಕೆ ಮಾತ್ರ)** **3** x 2 = 6

1) ಹುಯೇನ್ ತ್ಸಾಂಗನಿಗೆ ಇಂಡಿಯಾ ದೇಶಕ್ಕೆ ಹೋಗಲು ಏಕೆ ಆಸೆಯಾಯಿತು?

2) ರೋಗಿಗೆ ಧೈರಿಯ ಅಗತ್ಯತೆ ಏನು ?

3) ಬೆಳಗಿನ ಜಾವದಲ್ಲಿ ಎಂತಹ ಭಾವನೆಗಳು ತಲೆದೋರುವುದು ?

4) ಮಧ್ಯಯುಗದಲ್ಲಿ ಯುರೋಪಿನಲ್ಲಿ ಸಂಪ್ರದಾಯ ವಾದಿಗಳು ರೊಚ್ಚಿಗೆದುದರ ಪರಿಣಾಮವೇನಾಯಿತು?

33) **ಒಂದು ಪ್ರಶ್ನೆಗೆ 30 ರಿಂದ 40 ಪದಗಳಲ್ಲಿ ಉತ್ತರಿಸಿ :** **1** x 3 = 3

1) ಜಾತ್ರೆ ಸೇರುವ ವಿಷಯದಲ್ಲಿ ಲೇಖಕರು ನಡೆದುಕೊಂಡಂತಹ ರೀತಿ ಹಾಗೂ ಕೈಗೊಂಡ ಕಾರ್ಯಕ್ರಮಗಳನ್ನು ಕುರಿತು ವಿವರಿಸಿ ?

2) ಸೀತೆ ಮಂಡೋದರಿಯರ ಪಾತ್ರವನ್ನು ಚಿತ್ರಿಸಿ :

# ಮಾದರಿ ಉತ್ತರ ಪತ್ರಿಕೆ,

# ಕನ್ನಡ (208)

# ಹತ್ತನೇ (ಸೆಕೆಂಡರಿ) ತರಗತಿ

| ಸಂಖ್ಯೆ | ಪ್ರತಿ ಹಂತದ ಮೌಲ್ಯಮಾಪನದ ಪ್ರಮುಖಾಂಶಗಳು | ಅಂಕಗಳ ಹಂಚಿಕೆ | ಒಟ್ಟು ಅಂಕಗಳು |
|---|---|---|---|
| | **ಭಾಗ – 1** | | |
| | **ವಿಭಾಗ – ಅ** | | |
| 1 | **ಸರಿ/ತಪ್ಪು ತಿಳಿಸಿ (3ಕ್ಕೆ ಮಾತ್ರ)**<br>1) ತಪ್ಪು<br>2) ಸರಿ<br>3) ಸರಿ<br>4) ಸರಿ | **1**<br>**1**<br>**1**<br>**1** | 03 |
| 2) | **ಒಂದು ಪದದಲ್ಲಿ ಉತ್ತರಿಸಿ :**<br>1) ಜೊಂಡು<br>2) 'ವಾಯ್'<br>3) ಚಿಮ್ಮಟದಂತಿರುವ ಕೊಕ್ಕು<br>4) ಮೀನುಗಳು | 1<br>1<br>1<br>1 | 03 |
| 3) | **ಸರಿಯಾದ ಪದ ಆರಿಸಿ (ಒಂದು) ಬರೆಯಿರಿ :**<br>1) ಬೆಳಕು<br>2) ಗಮನಿಸು | 1<br>1 | 01 |
| | **ಭಾಗ – 1**<br>**ವಿಭಾಗ – ಬ (ಬರವಣಿಗೆ)** | | |
| 4) | **I) ಸರಿಯಾದ ಬದಲೀ ಉತ್ತರ ಬರೆಯಿರಿ :**<br>(ಇ) ಅಂಗವಿಕಲರು ಪ್ರವಾಸಿ ತಾಣಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳು | | 05 |

| | | | |
|---|---|---|---|
| | ಅಥವಾ<br>II)<br>ಆ) ಪ್ರವಾಸದ ತಾಣಗಳ ಎಲ್ಲಾ ಪ್ರಾಧಿಕಾರಗಳ ಬಗ್ಗೆ ಕ್ರಮ ಜರುಗಿಸಲು ದಾರಿ ನೀಡುತ್ತದೆ<br>III) 1 ಮತ್ತು 5<br>IV)<br>(ಇ) ತರಬೇತಿ ರಹಿತ ಪ್ರವಾಸಿ ಮಾರ್ಗದರ್ಶಕರು ಮತ್ತು ರ್‍ಯಾಂಪ್ ಇಲ್ಲದ ವೀಲ್ ಛೇರ್ ಇರುವುದು.<br>V)<br>A) ಪ್ರತಿಕ್ರಿಯೆಗಳು ಮತ್ತು B) ಕನಿಷ್ಠ ಮಾಹಿತಿ ದೊರಕುವಂತ ಮಾಡುವುದು<br>VI)<br>(ಆ) ಹೌದು ಆಯ್ಕೆಗೆ (1) ಏಕೆಂದರೆ ಅಧಿಕೃತ ಧ್ವನಿಯಾಗಿದೆ<br>(ಇ) (2) ಹೌದು ಆಯ್ಕೆಗೆ (2) ಏಕೆಂದರೆ ವಿನಮ್ರ ನಿರೀಕ್ಷ ಧ್ವನಿಯಾಗಿದೆ | 1<br>1<br>1<br>1<br>1 | |
| 05 | (i) (ಈ) ನೀರು ಸರಬರಾಜು ಇರುವುದಿಲ್ಲ<br>ಅಥವಾ<br>(ii) (ಆ) ಸಹಕಾರವನ್ನು ಕೋರಲಾಗಿದೆ<br>(iii) (ಆ) ನೀರಿನ ಸರಬರಾಜನ್ನು ಪರೀಕ್ಷಿಸಲು<br>(iv) (ಈ) ಮೇಲಿನ ಎಲ್ಲವೂ<br>(v) (ಈ) ಇಲ್ಲ ಇದು ಅಧಿಕೃತ ಸಹಿಯ ಮೂಲಕ ಬಂದಿದೆ ಎಂದು ಅರ್ಥೈಸುತ್ತದೆ | 1<br>1<br>1<br>1 | 04 |
| 06 | I)<br>(3) ವನ್ಯಜೀವಿಗಳ ಹಕ್ಕುಗಳನ್ನು ಬಲಪಡಿಸುವುದು ಮತ್ತು ಊರ್ಜಿತಗೊಳಿಸುವುದು ಜಾಗೃತಿ ಮೂಡಿಸುವುದು ಹಾಗೂ ಮಾನವನ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷಣೆಯನ್ನು ಕಡಿಮೆ ಮಾಡುವುದು<br>II)<br>(ಅ) ಪ್ರಾಣಿ ಮತ್ತು ಮಾನವ ಸಹ ಉಳಿವಿಗಾಗಿ ಹೋರಾಟ<br>III) (ಈ) ಆಯ್ಕೆ 4<br>IV) (ಅ) ಲೇಖನದ ಶಿರೋನಾಮೆ<br>V ಅ) (1) ಮೋಜು (2) ಮಾರಕ ಪರಿಣಾಮಗಳು | 1<br>1<br>1<br>1 | 04 |

| | | | |
|---|---|---|---|
| 07 | **ವಾಕ್ಯಗಳನ್ನು ರಚಿಸುವರು**<br>(ಅ) ಸಂಚಕಾರ (ಆ) ತಜ್ಞ (ಇ) ನಿವಾರಣೆ (ಈ) ಕ್ಷೇಮ<br>**ಅಥವಾ**<br>1) ಭೂರಿ ಭೋಜನ ತುಪ್ಪದ ಅನ್ನ ಪಕ್ವಾನ್ನ<br>2) ಪರಮಾನ್ನ, ಉತ್ಕೃಷ್ಟವಾದ ಸಿಹಿಯೂಟ<br>3) ಹುಲು ಮೊರಡಿಯಲ್ಲಿ ಹೆಬ್ಬಾವು<br>4) ನೀಲೆಗೌಡ ಕಾಡಿಗೆ ಹೆಜ್ಜೇನು ಜೊತೆಗೆ ಹೋದನು | 1<br>1<br>1 | 03 |
| 08 | 1) ಅರುಣೋದಯ<br>2) ಏಕೈಕ<br>3) ಸಕಲೈಶ್ವರ್ಯ<br>ಅಥವಾ<br>1) ಅತಿ + ಅಂತ<br>2) ಇತಿ + ಆದಿ<br>3) ಅತಿ + ಅವಸರ | 1<br>1<br>1<br>1<br>1<br>1 | 03 |
| 09 | 1) ಶಾಂತಿ – ಏಕವಚನ<br>2) ಕೃಷ್ಣ – ನಾಮಪದ<br>3) ರೈಲಿನಲ್ಲಿ – ಸಪ್ತಮಿ ವಿಭಕ್ತಿ ಪ್ರತ್ಯಯ<br>ಅಥವಾ<br>1) ಭದ್ರಕಾಳಿ<br>2) ರಾವಣ<br>3) ವಿಮಾನ | 1<br>1<br>1<br>1<br>1<br>1 | 03 |
| 10 | 1) ಹೋದನು<br>(2) ಬಳಸುತ್ತಿದ್ದಾರೆ<br>(3) ಆಯಿತು<br>(4) ಘರ್ಜಿಸಿತು<br>(5) ಕೈಗೊಂಡರು | 1<br>1<br>1<br>1 | 04 |
| 11 | ಲೇಖನ ಚಿಹ್ನೆಯನು ಗುರುತಿಸಿ : (2ಕ್ಕೆ ಮಾತ್ರ)<br>(1) ಕಾರಮಕ್ಕೆ ಅಂದರೆ ಏನು ಗೌಡರೆ ? | 1<br>1 | 02 |

| | | | |
|---|---|---|---|
| | (2) ಪೆರುವಿನ ಪವಿತ್ರ ಕಣಿವೆಯಲ್ಲಿ.<br>(3) ಮುಂಜಾನೆಯಿಂದ ಮಲಗುವ ತನಕ ಜೀವನ ಮೂಢನಂಬಿಕೆಗಳ ಮಯವಾಯಿತು ಯಾವ ದಿಕ್ಕಿಗೆ ಮಲಗಬೇಕು? | | |
| 12 | ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ : (3ಕ್ಕೆ ಮಾತ್ರ)<br>(1) ಕುನ್ನಿಗಳನೇನೆಂಬೆ<br>(2) ಕೂಡಲ ಸಂಗಮದೇವ<br>(3) ಕೊಂಬು<br>(4) ಬಂದುಗಳು | 1<br>1<br>1 | 03 |
| 13 | ಸರಿಯೋ ಅಥವಾ ತಪ್ಪೋ ತಿಳಿಸಿ : (3ಕ್ಕೆ ಮಾತ್ರ)<br>(1) ತಪ್ಪು<br>(2) ಸರಿ<br>(3) ಸರಿ 1<br>(4) ತಪು | 1<br>1<br>1 | 03 |
| 14 | **ಬಿಟ್ಟ ಸ್ಥಳವನ್ನು ತುಂಬಿರಿ (3ಕ್ಕೆ ಮಾತ್ರ)**<br>1) ಆಚಾರವಂತರು ಮತ್ತು ವರದಕ್ಷಿಣೆ ವಿರೋದಿ<br>2) ಮಹತ್ವಾಕಾಂಕ್ಷೆ<br>3) ವರದಕ್ಷಿಣೆ ವಿರೋಧಿ<br>4) ವರದಕ್ಷಿಣೆ ತೆಗೆದುಕೊಳ್ಳುವುದು | 1<br>1<br>1 | 03 |
| 15 | **ವಾಕ್ಯಗಳು ಸರಿಯೇ ತಪ್ಪೋ ತಿಳಿಸಿ**<br>1) ತಪ್ಪು<br>2) ಸರಿ<br>3) ತಪ್ಪು<br>4) ಸರಿ | 1<br>1<br>1 | 03 |
| 16 | **ಅ**<br>1) ಸಮಾಸ ಪದ<br>2) ಬಿಲ್ಲಯ<br>3) ಗೊಂಭೆ<br>**ಆ**<br>1) ಬಂಧು | 1<br>1<br>1<br>1<br>1 | 03 |

| | | | |
|---|---|---|---|
| | 2) ಅಂಧಕ<br>3) ಹಾವು | 1 | |
| 17 | 'ಸತ್ಯಾಗ್ರಹದಿಂದಲೇ'<br>ಅಥವಾ | 2 | 2 |
| 18 | ಕಂಡು ಅರಿಯದ ಭಕ್ತಿ ಗೌರವಗಳನ್ನು | | |
| 19 | ಶಕ್ತಿ, ಶಾಂತಿ, ಸ್ಯೆರಣೆ, ಸತ್ಯ, ನಿರ್ಭಯಗಳು<br>ಅಥವಾ | 2 | 2 |
| 20 | ಸತ್ಯಾನುಗ್ರಹದಿಂದ ಕೇಸರಿ ಬಣ್ಣದ ಸ್ವಯಂ ಸೇವಕಿಯರು | | |
| 21 | ಸಹಜ ಸ್ವಭಾವ ಪರರಿಗಾಗಿ ದುಃಖ ನುರಗುವುದು ಜಗದಿಷ್ಟಾರ್ಥಕ್ಕಾಗಿ<br>ಆತ್ಮತ್ಯಾಗಮಾಡುವುದು | 2 | 2 |
| 22 | (ಅ) ಕಷ್ಟವನ್ನು ಸಹಿಸುವುದು<br>(ಆ) ನೂರುಮೈಲಿ ದೂರ | 2 | 2 |
| 23 | ಅರ್ಜಿಲೇಖನ<br>ಇಂದ : ವಿಳಾಸ, ಗೆ : ವಿಳಾಸ, ವಿಷಯ ಪತ್ರದ ಒಡಲು ಸಹಿಯೊಂದಿಗೆ ಮುಕ್ತಾಯ / ಸ್ಥಳ, ದಿನಾಂಕ ಭಾಷಾ ಶೈಲಿಗೆ<br>ಅಥವಾ<br>1) ಗೆ – ವಿಳಾಸ<br>2) ಉದ್ಯೋಗದ ಹೆಸರು<br>3) ಉಲ್ಲೇಖ<br>4)<br>1) ಹೆಸರು<br>2) ತಂದೆ<br>3) ಜನ್ಮಸ್ಥಳ, ಹುಟ್ಟಿದ ದಿನಾಂಕ, ಪೂರ್ಣವಿಳಾಸ, ರಾಷ್ಟ್ರೀಯತೆ, ಮತ/ಜಾತಿ, ವಿದ್ಯಾರ್ಹತೆ ಅನುಭವ, ಶಾಲಾಧೃಡೀಕರಣ ಪತ್ರ ಬ್ಯಾಂಕ್/ಅಂಚೆ ಕಛೇರಿಯ ಹೆಸರು ಖರೀದಿಸಿದ ಡಿ ಡಿ . ನಂ / ಪಿ.ಓ ನಂ : ಇತ್ಯಾದಿ ವಿವರಗಳ, ಅರ್ಜಿಭರ್ತಿ ಮಾಡುವರು<br>5) ಮುಕ್ತಾಯ ಸಹಿ | 4 | 4 |
| 24 | ಮಾಹಿತಿಯನ್ನು ಬರೆಯುವರು | 2 | 2 |

| | | | |
|---|---|---|---|
| 25 | ವಾಕ್ಯವೃಂದ ರಚಿಸುವರು<br><br>ಅಥವಾ<br><br>ಪ್ರಬಂಧ ರಚನೆ ಪೀಠಿಕೆ / ಪ್ರಸ್ತಾವನೆ<br><br>ವಿಷಯದ ಬೆಳವಣಿಗೆ ಮುಕ್ತಾಯ / ಉಪಸಂಹಾರ<br><br>ಭಾಷಾಶೈಲಿಗೆ | 06 | 06 |
| | **ವಿಭಾಗ – ಸಿ – ವ್ಯಾಕರಣ** | | |
| 26 | ಉಪಮಾ ಅಲಂಕಾರ, ಎರಡು ವಸ್ತುಗಳಿರುವ ಹೋಲಿಕೆ ಉಪಮೇಯ– ನುಡಿ<br>ಉಪಮಾನ – ಮುತ್ತಿನಹಾರ,<br><br>ಉಪಮಾವಾಚಕ – ಅಂತ<br><br>ಸಮಾನ ಧರ್ಮ – ಜೋಡಣೆ<br><br>ನುಡಿಯನ್ನು – ಮುತ್ತಿನ ಹಾರಕ್ಕೆ ಹೋಲಿಸಿದ್ದಾರೆ | 2 | 2 |
| 27 | 1) ಮಿಗ 2) ಅಂಚೆ 3) ಮುಕುತಿ 4) ಕೋಗಿಲೆ | 2 | 2 |
| 28 | 1) ತಲೆಯ + ನೋವು = ತತ್ಪುರುಷ ಸಮಾಸ<br>2) ಕೈಯನ್ನು + ಹಿಡಿ = ಕ್ರಿಯಾಸಮಾಸ<br>3) ಹಿರಿದು + ಜೇನು = ಕರ್ಮಧಾರೆಯ ಸಮಾಸ<br>4) ಪರೀಕ್ಷೆಯ + ಅವಧಿ = ತತ್ಪುರುಷ ಸಮಾಸ | 1<br>1<br>1 | 3 |
| 29 | ಬಿಟ್ಟ ಸ್ಥಳ ತುಂಬುವಿಕೆ :<br>1) ಯಣ್ ಸಂಧಿ<br>2) ಚಿಕಿತ್ಸೆಯನ್ನು<br>3) ಸವರ್ಣಧೀರ್ಘಸಂಧಿ<br>4) ಸಪ್ತಮಿ ವಿಭಕಿ | 1<br>1<br>1<br>1 | 04 |
| 30 | **ಗುಂಪಿಗೆ ಸೇರದ ಪದ :**<br>ಅ) ತಲೆನೋವು<br>ಆ) ನೀರು | 1<br>1<br>1 | 4 |

| | | | |
|---|---|---|---|
| | ಇ) ಮೋಡ<br>ಈ) ತೊಗರಿಬೇಳೆ | 1 | |
| 31 | 1. ಬಿತ್ತಿದರೆ ಕಾಳು ಹನಿ ಹನಿಯಾಗಿರಬೇಕು, ನಂಬಿಕೆಯು ಮಾತ್ರ ದುಡಿದವನು ಬಸವಣ್ಣ<br>2. ಸ್ತುತಿ – ನಿಂಬೆಗಳಿಗೆ ಅಂಜಬಾರದೆಂದು ತಿಳಿಸಿದ್ದಾರೆ<br>3. ಆಚಾರವಂತನಾಗಿ, ನೀತಿವಂತ, ಚೂಡಾಮಣಿಯಾಗಿ ಜಗಕ್ಕೆಲ್ಲ ಜೊತೆಯಾಗಿರಬೇಕೆಂದು ಹಂಬಲಿಸಿದ್ದಾಳೆ<br>4. ಪ್ರೀತಿ ಚಿರಪರಿಚಿತ ಭಾವನೆ ಅರ್ಥೈಸಿಕೊಳ್ಳಲು ಕಡಲನ್ನು ನೋಡಿದರೆ ಸಾಕು ಎಂದು ಕವಿಯತ್ರಿಯ ಆಶಯ | 2<br>2<br>2 | 6 |
| 32 | 1) ಬೌಧ್ಧಮತದ ಮಾತೃಸ್ಥಾನವಾಗಿದ್ದರಿಂದ ಬೌದ್ಧಆಳವಾದ ಅಭ್ಯಾಸ ಮಾಡಲು ಹೆಸರಾಂತ ಪುಣ್ಯ ಕ್ಷೇತ್ರಗಳ ದರ್ಶನ ಮಾಡಬೇಕೆಂಬ ಆಸೆಯಾಯಿತು.<br>2) ತುರ್ತುಸ್ಥಿತಿಯಲ್ಲಿ ರೋಗಿಗೆ ಸಹಾಯವಾಗುತ್ತದೆ ಇದರಲ್ಲಿ ಕಾಯಿಲೆ ವಿಷಯ, ಔಷದೋಪಾಚಾರ ಸಂಗತಿಗಳನ್ನು ನಮೂದಿಸಿ ವೈದ್ಯರಲ್ಲಿಗೆ ಕೊಂಡೊಯ್ಯಬೇಕು.<br>3) ಅನಂತವಾದ ಹಾಗೂ ದಿವ್ಯವಾದ ಭಾವನೆಗಳು ಮೂಡುತ್ತವೆ<br>4) ವಿಜ್ಞಾನಿಗಳ ಮೇಲೆ ಅಮಾನುಷ ಕೃತ್ಯಗಳನ್ನೆಸಗಲಾಯಿತು, ಜೀವಾವದಿ, ಕಾರಾಗೃಹ ಶಿಕ್ಷೆ ವಿಧಿಸಿದ್ದು ಶೂಲಕ್ಕೆ ಏರಿಸಿದ್ದು ಹಾಗೂ ಸುಟ್ಟಿದ್ದು ಆಯಿತು | 2<br>2<br>2 | 6 |
| 33 | 1) ಲೇಖಕರು ಸ್ವತಃ ಡಿಸ್ಟ್ರಿಕ್ಟ್ ಕಲೆಕ್ಟರ್ ಆಗಿದ್ದರು ಜಾತ್ರೆ ಉತ್ಸವದ ಹೊಣೆ ಹೊತ್ತಿದ್ದ ಊರಿನವರು ಜಾತ್ರೆ ನೆಡೆಸಲು ಅನುಮತಿ ಕೋರಿ ಗೃಹಸ್ಥರೊಬ್ಬರು ಪತ್ರ ಬರೆದರು ಜಾತ್ರೆಯ ವಿಷಯದಲ್ಲಿ ಹತ್ತಾರು ಜನರ ಕ್ಷೇಮಕ್ಕಾಗಿ ಲೇಖಕರು ಕಛೇರಿಯಿಂದ ಕಛೇರಿಗೆ ಪತ್ರ ಹೋಗಲು ತಡವಾದಿತೆಂದು ಆ ಗೃಹಸ್ಥರಿಗೆ ಬಹು ಮರ್ಯಾದೆಯಿಂದ ಸ್ವತಃ ಕಾಗದವನ್ನು ಬರೆದರು ದೇವಾಲಯದ ಯೋಗಕ್ಷೇಮದ ವಿಷಯ ತಮ್ಮ ಬಳಿ ಮಾತನಾಡಬೇಕು ನಾನು ಇಂತಹ ದಿವಸ ಕೊಪ್ಪಕ್ಕೆ ಬರುವವನಿದ್ದೇನೆ ಎಂದು ಬರೆದು ಗೃಹಸ್ಥರಿಗೆ ಪತ್ರ ಮುಟ್ಟಿಸಿ ರಸೀದಿ ತರಿಸಿ ಎಂದು ತಾಲ್ಲೋಕಿಗೆ ಕಳುಹಿಸಿದರು<br>ಆ ದಿನ ದೇವಾಲಯದ ಕೆಲಸಕ್ಕಾಗಿ ಕೊಪ್ಪಕ್ಕೆ ಲೇಖಕರು ಹೋಗಿದಿದ್ದು ಕೆಲವರಿಗೆ ಗೊತ್ತಿತ್ತು ಆದರೂ ಕೆಲವರು ದೊಡ್ಡ ಮನುಷ್ಯರು ಬರುವುದಿಲ್ಲ ಎಂದು ತಳಿದಿದ್ದರೆ ಎಲ್ಲರಿಗೂ ಆಶ್ಚರ್ಯ ಕಾದಿತ್ತು<br>ಆ ಗೃಹಸ್ಥರು ಬಂದು ಲೇಖಕರ ಬಳಿ ಮರ್ಯಾದೆಯಿಂದ ಸೌಜನ್ಯದಿಂದ ನೆಡೆದುಕೊಂಡರು ಲೆಕ್ಕಾಚಾರದ ರಸೀತಿಗಳು ಕೆಲವು ಮಾತ್ರ ಇದೆ ಕೆಲವು ಲೆಕ್ಕ ಪತ್ರ | 3 | 3 |

| | | | |
|---|---|---|---|
| | ಬಾಕಿ ಎಂದಾಗ ಸಾಧ್ಯವಾದಷ್ಟು ಲೆಕ್ಕ ಕೊಡಿ ಎಂದು ಕೇಳಿದರು<br>ಆ ಗೃಹಸ್ಥರು ಬಂದು ಲೆಕ್ಕ ಪತ್ರದಲ್ಲಿ ವಿವರಗಳನ್ನು ಬರೆದು ಸಹಿ ಮಾಡಿ ಕೊಟ್ಟರು<br>ನಂತರ ಲೇಖಕರಿಗೆ ಬೆಂಗಳೂರಿಗೆ ವರ್ಗವಾಯಿತು ಗೃಹಸ್ಥ ಸಂಪನ್ನರಿಗೆ ಹಣ<br>ಬಂದಿರಬಹುದು ಹಣ ಬರದಿದ್ದರೆ ಸರ್ಕಾರ ಕೋರ್ಟಿಗೆ ಹೋಗಲು ಗೃಹಸ್ಥರಿಂದ<br>ಲೇಖಕರು ಬರೆಸಿಕೊಂಡ ಪತ್ರ ಸಾಕ್ಷಿಗೆ ಆಧಾರವಾಗಿತ್ತು<br>ಹೀಗೆ ಲೇಖಕರು ಸಾರ್ವಜನಿಕ ಹಿತಕ್ಕಾಗಿ ಗ್ರಾಮದ ಕೆಲವು ಹಿರಿಯರಿಗೆ<br>ಅಸಮಾಧಾನವಾದರೂ ಹತ್ತು ಜನರ ಕ್ಷೇಮಕ್ಕಾಗಿ ಲೇಖಕರು ನೆಡೆದುಕೊಂಡರು<br><br>2) ನಿಜವಾಗಲೂ ಸೀತೆ – ಮಂಡೋದರಿಯರು ಸ್ತ್ರೀ ಜಾತಿಯ ಆದರ್ಶ ಕುಸುಮಗಳು<br>ಮಂಡೋದರಿ ಲಂಕೆಯ ಅಮೃತ ಲತೆಯಂತಿದ್ದು ಸ್ತ್ರೀ ಜಾತಿಗೆ ಆದರ್ಶವಾಗಿದ್ದಳು<br>ಮಂಡೋದರಿ ಕೊನೆಯದಾಗಿ ಸೀತೆಗೆ ತನ್ನ ಆಸ್ಥಾನದಲ್ಲಿರುವ ಸಮಸ್ತ ವಸ್ತುಗಳನ್ನು<br>ತನ್ನ ನೆನಪಿಗಾಗಿ ಅಯೋಧ್ಯೆಗೆ ತೆಗೆದುಕೊಂಡು ಹೋಗಲು ಹೇಳಿದಳು<br>ಸೀತಾದೇವಿ ಮಾತಾ ಕೂಡ ಪತಿವ್ರತೆಯಾಗಿದ್ದು ಅವಳು ಲಂಕೆಯಲ್ಲಿದ್ದರು ರಾಮನ<br>ಧ್ಯಾನವನ್ನೇ ಮಾಡುತ್ತಾ ಇದ್ದಳು ಮಂಡೋದರಿಯ ಜೊತೆ ತಂಗಿಯಂತೆ<br>ನೆಡೆದುಕೊಂಡರು ಒಟ್ಟಿಗೆ ಸೇರಿ ಇಬ್ಬರೂ ಭದ್ರಕಾಳಿಯ ಪೂಜೆ ಮಾಡುತ್ತಾರೆ. | | |